ಕೆ.ಜಿ.ಎಫ್. ನಗರದಲ್ಲಿ ಮೀಸಲು ಕ್ಷೇತ್ರದಲ್ಲಿ ಕೈಗಾರಿಕೆಗಳ ಸ್ಥಾಪನೆ

518 - ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಕೆಜಿಎಫ್ ನಗರದ ರಾಜ್ಯದ ಮೀಸಲು ಕ್ಷೇತ್ರದಲ್ಲಿ ಒಂದಾಗಿದ್ದು ಈ ನಗರದಲ್ಲಿ ರಾಜ್ಯ ಸರ್ಕಾರದ ಯಾವೊಂದು ಕೈಗಾರಿಕೆಗಳು ಇಲ್ಲಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

2) *ಮೂರು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಕ್ಷೇತ್ರದಲ್ಲಿ ಇನ್ನಾದರೂ ಸರ್ಕಾರ ಅಥವಾ ಖಾಸಗಿಯ ಕೈಗಾರಿಕೆಗಳನ್ನು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

3) *ರಾಜ್ಯ ಸರ್ಕಾರವು ಇತ್ತೀಚೆಗೆ ಎನ್ಆರ್ಐನವರೊಡಗೂಡಿ ಸ್ಥಾಪಿಸಲು ಉದ್ದೇಶಿಸಿರುವ ಯಾವುದಾದರೊದು ಕೈಗಾರಿಕೆಗಳನ್ನು ಈ ನಗರದಲ್ಲಿ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

1) ಹೌದು.

ಸಾರ್ವಜನಿಕ ವಲಯದಲ್ಲಿ ಇಲ್ಲಿ ಕೈಗಾರಿಕೆ ಸ್ಥಾಪಿಸುವ ಬಗ್ಗೆ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವತಿಯಿಂದ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಆದರೆ ಖಾಸಗಿ ವಲಯದಿಂದ ಪ್ರಸ್ತಾವನೆ ಬಂದಲ್ಲಿ ಅರ್ಹತೆಯ ಮೇಲೆ ಪರಿಶೀಲಿಸಲಾಗುವುದು.

ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಖಾಸಗಿ ಕಂಪನಿಗಳಿಗೆ ವಹಿಸುವುದರ ಬಗ್ಗೆ

522 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಸರ್ಕಾರ ಸ್ವಾಮ್ಯದಲ್ಲಿರುವ ಎಷ್ಟು ಕೈಗಾರಿಕೆ ಕಂಪನಿಗಳನ್ನು ಖಾಸಗಿಗೆ ವಹಿಸಲು ನಿರ್ಧರಿಸಿದೆ?*

ಆ) *ಈ ಕೈಗಾರಿಕೆಗಳು ಯಾವುವು;*

ಇ) *ಖಾಸಗಿ ಕಂಪನಿಗೆ ವಹಿಸಲು ಕಾರಣಗಳೇನು? ಖಾಸಗೀಯವರಿಗೆ ವಹಿಸಲು ನಿರ್ಧರಿಸಿದ್ದರೆ ಈ ರೀತಿ ತಡವಾಗಲು ಕಾರಣಗಳೇನು?*

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಕರ್ನಾಟಕ ಸರ್ಕಾರವು ಕರ್ನಾಟಕ ಟೆಲಿಕಾಂ ನಿಯಮಿತದಲ್ಲಿ ಷೇರು ಬಂಡವಾಳವನ್ನು ಹಿಂತೆಗೆದುಕೊಳ್ಳಲು ಎನ್.ಜಿ.ಇ.ಎಫ್.ಗೆ ಒಪ್ಪಿಗೆ ನೀಡಿದೆ. ವಿಕ್ರಾಂತ್ ಟಯರ್ಸ್ ಲಿಮಿಟೆಡ್‌ಗೆ ಸೂಕ್ತ ತಾಂತ್ರಿಕ ಪಾಲುದಾರರನ್ನು ತರಲು ಕೆಎಸಐಐಡಿಸಿಗೆ ಒಪ್ಪಿಸಿದೆ ಹಾಗೂ ಅವಶ್ಯಕತೆ ಬಿದ್ದರೆ ಸೂಕ್ತ